ಓ.ಎಸ್. 158/2020
ಪಿ.ಡಬ್ಲ್ಯೂ : 01

<u>ದಿನಾಂಕ 15.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಹೆಚ್.ಎಲ್.ವಿ. ವಕೀಲರಿಂದಃ</u>

1. ನಾನು ನನ್ನ ವಾದ ಪತ್ರದಲ್ಲಿ ಯಾವ ಪರಿಹಾರಗಳನ್ನು ಕೋರಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ನಿಮ್ಮ ವಾದ ಪತ್ರದ ಪ್ರಾರ್ಥನೆಯಲ್ಲಿ ಯಾವ ಕರಾರು ಪತ್ರ ಯಾರ ನಡುವೆ ಆದ ಕರಾರು ಪತ್ರ ಎಂದು ಕರಾರು ಪತ್ರದ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲವೆಂದರೆ ಸಾಕ್ಷಿಯು ವಾದ ಪತ್ರದಲ್ಲಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ.
2. ಈ ದಾವೆಯ 3 ನೇ ಪ್ರತಿವಾದಿಯಾದ ತಿಮ್ಮಕ್ಕರವರು ಯಾವುದೇ ಕರಾರು ಪತ್ರ ಅಥವಾ ದಾಖಲೆಯ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. 2011 ರಿಂದ 3 ನೇ ಪ್ರತಿವಾದಿಯು ಸಹ ದಾವಾ ಅನುಸೂಚಿ ಸ್ವತ್ತಿನಲ್ಲಿ ಹಕ್ಕುಳ್ಳವರಾಗಿದ್ದರು ಎಂದರೆ ಸಾಕ್ಷಿಯು 2008 ರಲ್ಲಿ ನನಗೆ ಕರಾರು ಪತ್ರವನ್ನು ಬರೆದುಕೊಟ್ಟಾಗ 3 ನೇ ಪ್ರತಿವಾದಿಗೆ ಯಾವುದೇ ಹಕ್ಕು ದಾವಾ ಸ್ವತ್ತಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.
3. ನನಗೆ ದಿನಾಂಕ 30.01.2008 ರಂದು ಮುದ್ದಣ್ಣ ಮತ್ತು ನರಸಪ್ಪರವರು ಕರಾರು ಪತ್ರ ಬರೆದುಕೊಟ್ಟಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

**ಓದಿ ಹೇಳಿ ಕೇಳಿ ಸರಿ ಇದೆ**

**ಸಹಿ/-**
**ಹಿರಿಯ ಶ್ರೇಣಿ ನ್ಯಾಯಾಧೀಶರು**
**ಗೌರಿಬಿದನೂರು.**